# ಆಹಾ ಸುದ್ದಿ!

★ ಸಸಿತೋಟ



ಉತ್ತರ ವೇಲ್ಸ್‌ನ ಈ ಕುದುರೆ ಗಿಲ್ಬರ್ಟ್ ಬಿಯರ್‌ಪ್ರಿಯ. ಪಬ್‌ನ ಪಕ್ಕದ ಬಯಲಿನಲ್ಲೇ ಮೇಯುವ ಇದು ಆಗಾಗ ಪಬ್‌ಗೆ ಭೇಟಿ ನೀಡಿ ಒಂದೆರಡು ಪಿಂಟ್ ಬಿಯರ್ ಅನ್ನು ಹೊಟ್ಟೆಗೆ ಇಳಿಸುತ್ತದಂತೆ. ಗಿರಾಕಿಯ ನೋಟ ಆಚೀಚೆ ಸುತ್ತುವಾಗ ಕದ್ದು ಕುಡಿಯುವ ಚಟವೂ ಇದೆಯಂತೆ. ಆದರೆ ಗಿರಾಕಿಗಳೂ ಖುಷಿಪಡುತ್ತಾರಂತೆ, ತಮ್ಮ ಬಳಗಕ್ಕೆ ನಾಲ್ಕು ಕಾಲುಗಳ ಹೊಸ ಸದಸ್ಯ ಸೇರಿದ್ದಕ್ಕೆ ಇರಬಹುದು.

ಬ್ರಿಟನ್ನಿನಲ್ಲಿ ಮದ್ಯಪಾನ ಮಾಡುವ ವ್ಯಕ್ತಿ ತನ್ನ ಬದುಕಿನಲ್ಲಿ ಸರಾಸರಿ ಒಂದು ವರ್ಷ ಹ್ಯಾಂಗೋವರ್ (ಮದ್ಯಪಾನದಿಂದಾಗುವ ಜಡತ್ವ) ನಲ್ಲೇ ಕಳೆಯುತ್ತಾನಂತೆ. ಅಲ್ಲಿಯ ಸಂಸ್ಥೆಯೊಂದು ಈ ಬಗ್ಗೆ ಅಧ್ಯಯನ ನಡೆಸಿದೆ. ಕೆಲವರು ಇದರಿಂದಾಗಿ ನೇಮಕಾತಿ ಸಂದರ್ಶನಕ್ಕೆ ಗೈರು ಹಾಜರಾಗಿದ್ದರೆ, ಇನ್ನು ಕೆಲವರು ತಮ್ಮ ಮದುವೆಗೇ ಸರಿಯಾದ ಸಮಯಕ್ಕೆ ಹಾಜರಾಗದೇ ಮದುವೆ ರದ್ದತಿಗೆ ಕಾರಣರಾಗಿದ್ದಾರಂತೆ. ಮದುವೆ ವಿಷಯದಲ್ಲಾದರೂ ಹ್ಯಾಂಗೋವರ್ ನೆರವಿಗೆ ಬಂತಲ್ಲ!



ಈತ ಅಮೆರಿಕಾದ ನಿಕ್ ಸ್ಟೋಬರ್ಲ್. ನಾಲಿಗೆಯ ಉದ್ದ ಬರೋಬ್ಬರಿ 10.1 ಸೆಂ.ಮೀ. (3.97 ಇಂಚು). ಪ್ರಪಂಚದಲ್ಲೇ ಉದ್ದನೆಯ ನಾಲಿಗೆಯವ ಎಂದು ಗಿನ್ನೆಸ್ ದಾಖಲೆಗೆ ಸೇರಿದ್ದಾನೆ. ಅಧಿಕ ಪ್ರಸಂಗ ಮಾಡಿದವರು 'ನಾಲಿಗೆ ಉದ್ದವಾಯಿತು' ಎಂದು ಬೈಸಿಕೊಂಡರೂ ಬೇಸರ ಮಾಡಿಕೊಳ್ಳದೇ ಹೆಮ್ಮೆ ಪಡಬಹುದು.



ಈ ಕಾರ್ಡಿನಲ್ ಮೀನಿನ ಬಾಯೊಳಗೆ ವಜ್ರದಂತೆ ಹೊಳೆಯುತ್ತಿರುವುದು ಮೊಟ್ಟೆಗಳ ರಾಶಿ. ಆದರೆ ಮೊಟ್ಟೆಗಳನ್ನು ಮರಿ ಮಾಡ ಹೊರಟಿದ್ದು ಅಮ್ಮನಲ್ಲ, ಅಪ್ಪ! ಹೆಣ್ಣು ಮೀನಿನ ಕೆಲಸ ಮೊಟ್ಟೆಗಳನ್ನಿಟ್ಟ ನಂತರ ಮುಗಿದ ಹಾಗೆ. ಆರಾಮವಾಗಿ ತಿಂದುಂಡು ಈಜಾಡಿಕೊಂಡಿರುತ್ತದೆ. ಆದರೆ ಗಂಡು ಮೀನು ಸಂತಾನ ಬೆಳೆಸುವ ಹುಮ್ಮಸ್ಸಿನಲ್ಲಿ ಉಪವಾಸ ಇರುತ್ತದಂತೆ. ಲಿಂಗ ಸಮಾನತೆಯಲ್ಲಿ ನಮಗಿಂತ ಮುಂದಿವೆ ಈ ಮೀನು ಕುಲ.



ಅರ್ಜೆಂಟೀನಾದ ಕುದುರೆ ತರಬೇತುದಾರ ಮಾರ್ಟಿನ್ ಟಾಟಾ ಕುದುರೆಯನ್ನು ಮಾನವೀಯ ವಿಧಾನಗಳಿಂದ ಪಳಗಿಸುವುದರಲ್ಲಿ ಖ್ಯಾತ. ಅಂದರೆ ಚಾಟಿಯೇಟು ನೀಡುವ ಬದಲು ಮೆದು ಮಾತುಗಳಿಂದ ಓಲೈಸುತ್ತಾನಂತೆ. ಬ್ಲಾಂಕೆಟ್ ಹೊದೆಸಿ ಪೂಸಿ ಮಾಡುತ್ತಾನಂತೆ. ಆಮಿಷ ಒಡ್ಡುತ್ತಾನಂತೆ. ಪಾಪ, ಕುದುರೆಗೂ ಲಂಚದ ರುಚಿ ಹತ್ತಿಸುತ್ತಿದ್ದಾನೆ.

ನಾರ್ವೆಯಲ್ಲಿ ಕೈದಿಗಳಿಂದಾಗಿ ಜೈಲು ತುಂಬಿ ತುಳುಕುತ್ತಿದ್ದು, ನೆದರ್ಲೆಂಡ್‌ಗೆ ಜೈಲನ್ನು ಬಾಡಿಗೆಗೆ ನೀಡುವಂತೆ ಮನವಿ ಮಾಡಿದೆಯಂತೆ. ನೆದರ್ಲೆಂಡ್ ಜೈಲುಗಳನ್ನು ಈಗಾಗಲೇ ತನ್ನ ನೆರೆಯ ಬೆಲ್ಜಿಯಂ ದೇಶಕ್ಕೆ ಬಾಡಿಗೆಗೆ ನೀಡಿದ್ದು, ದೂರದ ನಾರ್ವೆಯ ಮನವಿಯನ್ನು ಕೈ ಬಿಡುವ ಸೂಚನೆ ಇದೆಯಂತೆ. ಬೇರೆ ದೇಶಗಳು ಈ ಬೇಡಿಕೆಯನ್ನು ನಗದೀಕರಿಸಿಕೊಳ್ಳಲು ಒಳ್ಳೆಯ ಅವಕಾಶ. ಮುಂದೊಂದು ದಿನ ದ್ವಿಪಕ್ಷೀಯ ಮಾತುಕತೆಯಲ್ಲಿ ಜೈಲು ಬಾಡಿಗೆಯನ್ನೂ ಅಜೆಂಡಾದಲ್ಲಿ ಸೇರಿಸಿಕೊಳ್ಳಬಹುದು.